ಓ ಎಸ್ಃ 541/2022

ಪಿ ಡಬ್ಲ್ಯೂ ಃ 2

ದಿನಾಂಕಃ 20.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದಃ**

ನಾನು 8 ನೆ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತೇನೆ. ನಾನು ವ್ಯವಸಾಯ ಮತ್ತು ಟ್ರಾನ್ಸಫಾರ್ಮರ್ ತಯಾರು ಮಾಡುವ ಫ್ಯಾಕ್ಟರಿ ಇಟ್ಟುಕೊಂಡಿರುತ್ತೇನೆ. ನಾನು ಗೊಲ್ಲರಹಟ್ಟಿಯಲ್ಲಿ ಸದರಿ ಫ್ಯಾಕ್ಟರಿಯನ್ನು ನಡೆಸುತ್ತಿದ್ದೇನೆ. ನಾನು ಕಳೆದ 20 ವರ್ಷಗಳಿಂದ ಸದರಿ ಫ್ಯಾಕ್ಟರಿಯನ್ನು ನಡೆಸುತ್ತಿದ್ದೇನೆ. ನಾನು ಸದರಿ ಫ್ಯಾಕ್ಟರಿ ನಡೆಸಿಕೊಂಡು ಬೆಂಗಳೂರಿನಲ್ಲಿ ವಾಸವಿದ್ದೀನಾ ಎಂದರೆ ಸಾಕ್ಷಿ ನಾನು ವರ್ತೂರಿನಲ್ಲಿ ವಾಸವಿದ್ದು ಬೆಂಗಳೂರಿಗೆ ಹೋಗಿ ಬರುವುದು ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ಮತ್ತು ವರ್ತೂರಿನಲ್ಲಿ ಎರಡೂ ಕಡೆ ವಾಸವಿದ್ದೇನೆ. ನನ್ನ ಪ್ರಮಾಣಪತ್ರದಲ್ಲಿ ನಾನು ಬೆಂಗಳೂರು ಮತ್ತು ವರ್ತೂರು ಎರಡೂ ಕಡೆ ವಾಸವಿರುವ ಬಗ್ಗೆ ಹೇಳಿಲ್ಲ ಎಂದರೆ ಸರಿ. ಪ್ರತಿವಾದಿ 2 ಮತ್ತು ನಾನು ಒಂದೇ ಊರಿನವರಾಗಿದ್ದು , ನಾವಿಬ್ಬರೂ ಜೊತೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ.

ನಾನು ಎಲ್ಲಿ ವಾಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀನಾ ಎಂದರೆ ನಾನು ನ್ಯಾಯಾಲಯಕ್ಕೆ ನನ್ನ ವಾಸದ ಬಗ್ಗೆ ಹೇಳಲು ದಾಖಲಾತಿಗಳನ್ನು ನೀಡಿರುತ್ತೇನೆ. ನಾನು ಸದರಿ ದಾಖಲಾತಿಗಳನ್ನು ಸುಮಾರು 20 ದಿನಗಳ ಮುಂಚೆ ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ಆ ರೀತಿಯಾದಂತಹ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸುಳ್ಳು. ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಯಾವುದೇ ನೋಟೀಸ್ ಜಾರಿಯಾಗಿರುವುದಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ವಾದಿ ನಂಬರ 1 ರಿಂದ 4 ರವರು ಕರೆದುಕೊಂಡು ಬಂದಿರುತ್ತಾರೆ. ನಾವು ಒಂದೇ ಊರಿನವರು, ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆ ತಂದಿರುತ್ತಾರೆ. ವಾದಿ ಮತ್ತು ನಾವು ಒಂದೇ ಊರಿನವರು, ಸಾಕ್ಷಿ ನುಡಿಯಲು ನನ್ನನ್ನು ವಾದಿಗಳು ಕರೆಯಿಸಿರುತ್ತಾರೆ ಎಂದು ನಾನು ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ವಾದಿ ಮತ್ತು ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ನಡುವೆ ಆಗಿರುವ ವ್ಯವಹಾರಗಳ ಬಗ್ಗೆ ಗೊತ್ತಿರುವುದಿಲ್ಲ. ವಾದಿಗಳು ಮಾಡಿರುವ ಈ ದಾವೆಗೆ ಸಂಬಂದಪಟ್ಟ ವ್ಯವಹಾರದ

ಬಗ್ಗೆ ನನ್ನನ್ನು ನ್ಯಾಯಾಲಯಕ್ಕೆ ಕರೆತಂದಾಗ ಗೊತ್ತಾಗಿರುತ್ತದೆಯೋ ಹೊರತು ಈ ಹಿಂದೆ ಅದರ ಬಗ್ಗೆ ಗೊತ್ತಿರುವುದಿಲ್ಲ.

ವಾದಿಗಳು ಈ ದಾವೆಯನ್ನು ವಿಭಾಗ ಕೇಳಿ ಹಾಕಿರುತ್ತಾರೆ. ಈ ದಾವೆಯನ್ನು ವಾದಿಗಳು , ಪ್ರತಿವಾದಿಗಳ ವಿರುದ್ದ ಭಾಗ ಕೋರಿ ಹಾಕಿರುತ್ತಾರೆ. ನನಗೆ ಈ ದಾವೆಯ ಸ.ನಂ. 36/4 ಮಾತ್ರ ಗೊತ್ತಿರುತ್ತದೆ, ಇನ್ನು ಉಳಿದ ಜಮೀನು ಗಳ ಸ.ನಂ. ಗಳು ಗೊತ್ತಿರುವುದಿಲ್ಲ, ಆದರೆ ಅದರ ಜಾಗ ಗೊತ್ತಿರುತ್ತದೆ. ವಾದಿಗಳು ಸುಮಾರು 4 ಸ್ವತ್ತುಗಳ ಮೇಲೆ ದಾವೆಯನ್ನು ಹೂಡಿರುತ್ತಾರೆ. ಈ ದಾವಾ ಸ್ವತ್ತುಗಳು ಯಾರ ಹೆಸರಿಗೆ ಇರುತ್ತದೆ ಎಂದು ನಾನು ನೋಡಿರುವುದಿಲ್ಲ.ದಾವಾ ಸ್ವತ್ತುಗಳು ಮೂಲತಃ ವಾದಿಗಳ ತಾತನ ಸ್ವತ್ತು ಆಗಿರುತ್ತದೆ. ನಾನು ವಾದಿಗಳ ತಾತನ ಸ್ವತ್ತು ಎಂದು ಹೇಳಲು ನಾನು ಯಾವ ದಾಖಲಾತಿಗಳನ್ನು ನೋಡಿರುತ್ತೇನೆ ಎಂದು ಕೇಳಿದರೆ ಸಾಕ್ಷಿ ನಾನು ಅದೇ ಊರಿನವನಾಗಿದ್ದ ಕಾರಣ ನನಗೆ ಅದರ ಬಗ್ಗೆ ಗೊತ್ತಿರುತ್ತದೆ, ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸ.ನಂ. 36/4 ರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಆದರೆ ಅದರ ಚೆಕ್ ಬಂದಿ ಗೊತ್ತಿರುತ್ತದೆ. ಆ ಸ್ವತ್ತನ್ನು ಪ್ರತಿವಾದಿ 1 ರವರು ಕ್ರಯಕ್ಕೆ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ಅದೇ ರೀತಿ ಐಟಂ ನಂಬರ್ 5 ನ್ನು ಬೇರೆಯವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರವರು ಐಟಂ ನಂಬರ್ 2 , 3 ಮತ್ತು 5 ನ್ನು ಸ್ವಂತವಾಗಿ ಕ್ರಯಕ್ಕೆ ಪಡೆದಿರುವ ವಿಚಾರ ನನಗೆ ಗೊತ್ತಿದೆಯೋ ಎಂದರೆ ಸಾಕ್ಷಿ ನನಗೆ ಕ್ರಯಕ್ಕೆ ಪಡೆದಿರುವ ವಿಚಾರ ಗೊತ್ತಿಲ್ಲ, ಆದರೆ ಪಿತ್ರಾರ್ಜಿತ ಸ್ವತ್ತನ್ನು ಮಾರಿ ಜಮೀನನ್ನು ಖರೀದಿ ಮಾಡಿರುವ ವಿಚಾರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮಾರಾಟ ಮಾಡಿದ ಪಿತ್ರಾರ್ಜಿತ ಸ್ವತ್ತಿನ ಜಾಗ ನನಗೆ ಗೊತ್ತಿರುತ್ತದೆ, ಅದರ ಸ.ನಂ. ನನಗೆ ಗೊತ್ತಿರುವುದಿಲ್ಲ. ಸದರಿ ಪಿತ್ರಾರ್ಜಿತ ಸ್ವತ್ತನ್ನು ಯಾರಿಗೆ ಮಾರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ 1 ರವರು ಯಾವಾಗ ಜನಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವೆಂಕಟಚಲಯ್ಯ ನವರ ತಂದೆ ಅವರ ತಾಯಿ ತೀರಿಕೊಂ ಡ ನಂತರ ವಾದಿಗಳ ತಾಯಿಯನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ, ಸದರಿ ಮದುವೆಯಾದ ಸಮಯದಲ್ಲಿ ವೆಂಕಟಚಲಯ್ಯ ನವರಿಗೆ 1 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ವೆಂಕಟಚಲಯ್ಯ ನವರು 3 ತಿಂಗಳ ಮಗುವಾಗಿದ್ದರು ಎಂದು ನುಡಿಯುತ್ತಾರೆ. ವೆಂಕಟಚಲಯ್ಯ ನವರಿಗೆ ಈಗ ಸುಮಾರು 85 ವರ್ಷ ವಯಸ್ಸಾಗಿರಬಹುದು. ವಾದಿಗಳಿಗೆ ಸುಮಾರು 65 /70 ವರ್ಷಗಳಿಗಿಂತ ಕಡಿಮೆ ಆಗಿರುತ್ತದೆ. ವಾದಿಗಳು ಮದುವೆಯಾದ ನಂತರ ಸುಮಾರು 50 ವರ್ಷಗಳಿಂದ ಅವರ ಗಂಡನ ಮನೆಯಲ್ಲಿರುತ್ತಾರೆ ಎಂದರೆ ಸರಿ. ವಾದಿಗಳು

ವರ್ತೂರಿಗೆ ಬಂದು ಸಂಸಾರ ಮಾಡಿರುವುದಿಲ್ಲ ಎಂದರೆ ಸಾಕ್ಷಿ ವಾದಿಗಳು ನಮ್ಮ ವರ್ತೂರಿಗೆ 3 ತಿಂಗಳಿಗೊಮ್ಮೆ ಬಂದು ಹೋಗುತ್ತಾರೆ. ವಾದಿಗಳು ವರ್ತೂರಿನ ಯಾರ ಮನೆಗೆ ಬಂದು ಹೋಗುತ್ತಾರೆ ಎಂದು ನನಗೆ ಗೊತ್ತಿಲ್ಲ.

ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿದೆ. ಪ್ರಮಾಣಪತ್ರದಲ್ಲಿ ಇರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ವರ್ತೂರು ಗ್ರಾಮದಲ್ಲಿ ನನ್ನ ಹೆಸರಿಗೆ ಜಮೀನು ಇರುವುದಕ್ಕೆ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನಾನು ಆ ರೀತಿಯಾದಂತಹ ಯಾವುದೇ ದಾಖಲಾತಿಗಳನ್ನು ಕೊಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೂ ಮತ್ತು ದಾವಾ ಐಟಂ ನಂಬರ್ 2 ಕ್ಕೂ 900 /1000 ಅಡಿಗಳ ದೂರು ಇರುತ್ತದೆ ಎಂದು ತೋರಿಸಲು ಯಾವುದೆ ಸ್ಕೆಚ್ ನೀಡಿರುವುದಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ವೀರಚನ್ನಯ್ಯ ನವರ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನಗೆ ಆ ಜಮೀನಿನ ಚೆಕ್ ಬಂದಿ ಗೊತ್ತು. ನಾನು ನಮ್ಮ ಮನೆಗೆ ಸಂಬಂದಪಟ್ಟ ದಾಖಲಾತಿಗಳನ್ನು ನೀಡಿರುವುದಿಲ್ಲ .

ವೆಂಕಟಚಲಯ್ಯ ಮತ್ತು ತಿಮ್ಮಕ್ಕ ನವರು 1980 ರಲ್ಲಿ ಪಂಚಾಯಿತಿ ಪಾರಿಕತ್ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಯಾವುದೇ ಭಾಗಗಳು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. 1980 ರಿಂದ ವಾದಿ ಮತ್ತು ಪ್ರತಿವಾದಿಗಳು ಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂಬರ್ 1 ಮತ್ತು 6 ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರು ಭಾಗ ಮಾಡಿಕೊಂಡಿರುವ ಪ್ರಕಾರ ಅವರವರ ಹೆಸರು ಪಹಣಿಗಳಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರವರು ಮಿಕ್ಕ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಮತ್ತು ಅವರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸುಳ್ಳು. ವಾದಿಗಳು ವರ್ತೂರಿನಲ್ಲಿ ವಾಸವಿಲ್ಲ , ದಾವಾ ಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**